2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 15(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2000ದಂದು ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ವರದಿಯನ್ನು ಸಿವಿಲ್ ಸಂಖ್ಯೆ (3)ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

ಶ್ರೀ ಡಿ.ವಿ. ಸದಾನಂದಗೌಡ :— ಕೆಳ ಮನೆಯಲ್ಲಿರುವ ಶಾಸಕರು ಯಾವ ವಿಚಾರಗಳನ್ನೂ ಪ್ರಸ್ತಾಪ ಮಾಡುವುದಿಲ್ಲ, ಎಲ್ಲಾ ವಿಚಾರಗಳೂ ಮೇಲ್ಮನೆಯಲ್ಲಿ ಪ್ರಸ್ತಾಪವಾಗುತ್ತವೆ ಎಂಬ ಆರೋಪ ಇದೆ.

MR SPEAKER. :— I have no comments about the proceedings of the other House. It is not fair also.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಕುದುರೆಮುಖ ಕಂಪನಿಗೆ ನೀಡಿರುವ ಗಣಿಗಾರಿಕೆ ಗುತ್ತಿಗೆ ಅವಧಿಯನ್ನು ಇನ್ನೂ ಮೂರು ತಿಂಗಳು ಮುಂದುವರಿಸಲು ಸರ್ಕಾರ ನಿರ್ಧರಿಸಿರುವುದರ ಬಗ್ಗೆ

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೆ, ಕುದುರೆಮುಖದಲ್ಲಿ ಗಣಿಗಾರಿಕೆ ನಿಲ್ಲಿಸಬೇಕೆಂದು ಡಾ: ಯು.ಆರ್. ಅನಂತಮೂರ್ತಿಯವರ ನೇತೃತ್ವದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಕೊಟ್ಟು ಪ್ರಪಂಚದ ಅತ್ಯಂತ ಸೂಕ್ಷ್ಮವಾದ ಪರಿಸರ ಪ್ರದೇಶಗಳಲ್ಲಿ ಒಂದಾದ ಪಶ್ಚಿಮ ಘಟ್ಟದಲ್ಲಿ ಗಣಿಗಾರಿಕೆ ಮಾಡಬಾರದು ಅದರಿಂದ ಏನು ತೊಂದರೆ ಇದೆ ಎಂದು ಮನವರಿಕೆ ಮಾಡಿ ಕೊಟ್ಟಿದ್ದು, ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅದರ ಬಗ್ಗೆ ಯೋಗ್ಯವಾದ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ನಮಗೆ ಬಹಳ ಪಾಸಿಟೀವ್ ಆಗಿ ಹೇಳಿದರು. ಅದೇ ರೀತಿ ಮೊನ್ನೆ ದಿನ ಸದನದಲ್ಲಿ ಸ್ಟೇಟ್‌ಮೆಂಟ್ ಕೂಡ ಮಾಡಿದರು. ಮಾರನೆ ದಿನ ಕ್ಯಾಬಿನೆಟ್ ಎದುರಿಗೆ ಚರ್ಚೆಗೆ ತರುತ್ತೇವೆ, ಇದರ ಬಗ್ಗೆ ಸಹಾನುಭೂತಿ ಇದೆ, ಕುದುರೆಮುಖದಲ್ಲಿ ಗಣಿಗಾರಿಕೆ ಮಾಡುವುದರಿಂದ ಏನೆಲ್ಲಾ ಅನಾಹುತ ಆಗುತ್ತದೆ ಎಂದು ನಮ್ಮ ಗಮನಕ್ಕೆ ಬಂದಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಇದುವರೆಗೆ ಏನು ನಿರ್ಧಾರವಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಪ್ರಕಟ ಮಾಡಲಿಲ್ಲ. 24ನೇ ತಾರೀಖಿಗೆ ಕುದುರೆ ಮುಖ ಅದಿರು ಕಂಪನಿಗೆ

ಕೊಟ್ಟಿರುವ ಗುತ್ತಿಗೆಯನ್ನು ರಿನೀವಲ್ ಮಾಡುವುದಕ್ಕೆ ಕೊನೆಯ ದಿನವಾಗಿದೆ. ಅದರ ಅವಧಿ ಇವತ್ತಿಗೆ ಗುತ್ತಿಗೆಯನ್ನು ರಿನೀವಲ್ ಮಾಡುವುದಕ್ಕೆ ಕೊನೆಯ ದಿನವಾಗಿದೆ. ಅದರ ಅವಧಿ ಇವತ್ತಿಗೆ ಮುಗಿಯುತ್ತದೆ. ಇವತ್ತು ಹೊಸದಾಗಿ ರಿನೀವಲ್ ಮಾಡಿ ಮತ್ತೆ ಎಕ್ಸ್‌ಟೆಂಡ್ ಮಾಡುತ್ತಾರೆ, ಅಥವಾ ಇಲ್ಲ ಎನ್ನುವುದರ ಬಗ್ಗೆ ಕರ್ನಾಟಕ ರಾಜ್ಯದ ಜನತೆ ಅತ್ಯಂತ ಕುತೂಹಲಭರಿತರಾಗಿದ್ದಾರೆ. ಅದರ ಜೊತೆಗೆ ತುಂಗ ಮತ್ತು ಭದ್ರಾ ನದಿಯ ದಡದಲ್ಲಿ ಇರತಕ್ಕಂತಹ ಸುಮಾರು 15-20 ಜಿಲ್ಲಾ ಕೇಂದ್ರಗಳು ಬಂದ್ ಆಚರಿಸಿವೆ. ಪರಿಸರ ಹೋರಾಟ ಸಮಿತಿ ಮತ್ತು ವಿವಿಧ ರಾಜಕೀಯ ಪಕ್ಷಗಳವರು - ಕಾಂಗ್ರೆಸ್‌ನವರು, ದಳದವರು ಮತ್ತು ಬಿಜೆಪಿಯವರು ಆ ಭಾಗದಲ್ಲಿ ಯಾರು ನೀರನ್ನು ಉಪಯೋಗಿಸುತ್ತಾರೆ, ಹೊಳೆಯ ನದಿ ದಡದಲ್ಲಿದ್ದಾರೆ ಅವರೆಲ್ಲರೂ ಸೇರಿ ಸರ್ಕಾರದ ಗಮನವನ್ನು ಹರಿಸುವ ದೃಷ್ಟಿಯಿಂದ ಇವತ್ತು ಬಂದ್ ಆಚರಿಸಿ ಇವತ್ತು ಪ್ರತಿಜ್ಞೆ ತೆಗೆದುಕೊಳ್ಳುತ್ತಿದ್ದಾರೆ. ಆ ಎರಡು ನದಿಗಳನ್ನು ಉಳಿಸಬೇಕು, ಪಶ್ಚಿಮ ಘಟ್ಟದ ಅತ್ಯಂತ ಸೂಕ್ಷ್ಮ ಪ್ರದೇಶದಲ್ಲಿರತಕ್ಕಂತಹ ಪ್ರದೇಶವನ್ನು ಉಳಿಸಬೇಕು. ಮಲಿನ ಮಾಡಬಾರದು. ಕುದುರೆಮುಖ ಗಣಿಗಾರಿಕೆಯಿಂದ ಆಗಿರತಕ್ಕಂತಹ ಅನಾಹುತವನ್ನು ಸರಿಪಡಿಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಕ್ರಮ ಕೈಗೊಳ್ಳಬೇಕು. ಗಣಿಗಾರಿಕೆ ಮುಚ್ಚುವುದರಿಂದ ಅಲ್ಲಿರುವಂತಹ ಕಾರ್ಮಿಕ ವರ್ಗ ಏನಿದೆ ಅವರು ತೊಂದರೆಗೊಳಗಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ಅದರ ಹಿತದೃಷ್ಟಿಯನ್ನು ಪರಿಗಣಿಸುವ ನಿಟ್ಟಿನಲ್ಲಿ ವಿಶೇಷವಾದ ಒತ್ತಾಯವನ್ನು ಮಾಡುತ್ತಿದ್ದೇನೆ. ಸಾಕಷ್ಟು ಮಳೆ ಬೀಳತಕ್ಕಂತಹ ಪ್ರದೇಶ ಇದು. ಈ ಪಶ್ಚಿಮ ಘಟ್ಟ ಪ್ರದೇಶ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದೆ. ಈಗಾಗಲೇ ಭದ್ರಾ ನದಿಯ 45 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲೂ ಕೂಡ ಒಂದು ಬುಟ್ಟಿ ಮರಳು ಸಿಗದ ಪರಿಸ್ಥಿತಿ ಉಂಟಾಗಿದೆ. ಈ ನದಿಯ ಎರಡೂ ದಂಡೆಗಳು ಕಬ್ಬಿಣದ ಅದಿರಿನ ಪುಡಿಯಿಂದ ಮಲೀನವಾಗಿದೆ. ಭದ್ರಾ ನದಿಯ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಕೃಷಿ ವಲಯದಿಂದಲೇ ಸುಮಾರು 727 ಕೋಟಿ ರೂ.ಗಳ ಆದಾಯ ಸರ್ಕಾರಕ್ಕೆ ಬರುತ್ತದೆ ಎಂದು ಅಂಕಿ ಅಂಶಗಳಿಂದ ತಿಳಿದಿದೆ. ಇಂಥ ಒಂದು ನದಿಯನ್ನು ಗಣಿಗಾರಿಕೆಯಿಂದ ಕಳೆದುಕೊಳ್ಳುವ ಹಂತಕ್ಕೆ ಬಂದಿದ್ದೇವೆ. ಪ್ರಕೃತಿದತ್ತವಾದ ಅರಣ್ಯಗಳು ನಾಶವಾಗಿರುವುದನ್ನು ಪರ್ಯಾಯವಾಗಿ ಅರಣ್ಯ ಬೆಳೆಸುವ ಮೂಲಕ ಮಾಡುವುದಕ್ಕೆ ನಮ್ಮಿಂದ ಆಗುವುದಿಲ್ಲ. ಇದೇ ರೀತಿ ಎಷ್ಟೇ ಕೋಟಿ ರೂ.ಗಳನ್ನು ವ್ಯಯ ಮಾಡಿದರೂ ಕೂಡ ಒಂದು ಭದ್ರಾ ನದಿಯನ್ನು ಸೃಷ್ಟಿ ಮಾಡುವುದಕ್ಕೆ ಆಗುವುದಿಲ್ಲವೆನ್ನುವುದೂ ಸತ್ಯ. ಇದೇ ಪರಿಸ್ಥಿತಿ ತುಂಗಾ ನದಿಯಲ್ಲೂ ಇದೆ. ಇಂಥ ಜೀವ ನದಿಗಳಾದ ತುಂಗಾ ಮತ್ತು ಭದ್ರಾ ನದಿಗಳನ್ನು ಉಳಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರ ಮನ್ನಸ್ಸು ಮಾಡಬೇಕು. ಈಗಾಗಲೇ ಮಾಧ್ಯಮಗಳಲ್ಲಿ ಮೂರು ತಿಂಗಳ ಕಾಲಕ್ಕೆ ರಿನ್ಯೂವಲ್ ಮಾಡಲಾಗಿದೆ ಎನ್ನುವ ವಿಷಯ ಬಂದಿದೆ. ಈ ಸುದ್ದಿ ಬಂದಿರುವುದರಿಂದ ಕರ್ನಾಟಕದ ಜನರು ಮುಖ್ಯಮಂತ್ರಿಗಳು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ

ಎನ್ನುವುದಕ್ಕೆ ಸಂಬಂಧಪಟ್ಟಂತೆ ಕುತೂಹಲದಿಂದ ನೋಡುತ್ತಿದ್ದಾರೆ. ಮಾಧ್ಯಮದವರೂ ಕೂಡ ಕೂತೂಹಲಿಗಳಾಗಿದ್ದಾರೆ. ಇವೊತ್ತು ಬೆಳಗಿನಿಂದಲೂ ತುಂಗಾ ಮತ್ತು ಭದ್ರಾ ನದಿಯ ವ್ಯಾಪ್ತಿಯ ಪ್ರದೇಶದಲ್ಲಿ ಬರುವ ಎಲ್ಲಾ ಜನರೂ ಗಣಿಗಾರಿಕೆ ವಿರುದ್ಧವಾಗಿ ಬಂದ್ ಆಚರಿಸಿದ್ದಾರೆ. ಇದು ಯಶಸ್ವಿ ಕೂಡ ಆಗಿದೆ. ಎಲ್ಲರೂ ಬಂದ್‌ನಲ್ಲಿ ಆಚರಿಸಿ ಜನಾಂದೋಲನವೇ ಆಗಿದೆ. ಅಲ್ಲಿರುವ ಜನರು ಗುಂಪು ಗುಂಪಾಗಿ ಯಾವುದೇ ರೀತಿಯಿಂದಲೂ ಗಣಿಗಾರಿಕೆ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಿದ್ದಾರೆ. ಪ್ರಕೃತ್ತಿದತ್ತವಾದ ಎರಡು ನದಿಗಳನ್ನು ನಾವು ಉಳಿಸಿಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತಿದ್ದಾರೆ. ಈ ಹೋರಾಟದ ಪ್ರತಿಜ್ಞೆಯನ್ನು ಹಮಾಲಿಯಿಂದ ಹಿಡಿದು ರಿಕ್ಷಾ ಮಾಲೀಕರು ಮತ್ತು ಎಲ್ಲಾ ಪಕ್ಷಗಳ ಜನರು ಇದೇ ರೀತಿ ಪ್ರತಿಜ್ಞೆಯನ್ನು ಮಾಡುತ್ತಿದ್ದಾರೆ. ಅಲ್ಲಿರುವ ಎಲ್ಲಾ ಪರಿಸರ ಸಂಘಟನೆಗಳು ಕೂಡ ಇದೇ ರೀತಿಯಲ್ಲಿ ಪ್ರತಿಜ್ಞೆಯನ್ನು ಮಾಡುತ್ತಿದ್ದಾರೆ. ಆದ ಪ್ರಯುಕ್ತ ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ) :— ಮಾನ್ಯ ಅಧ್ಯಕ್ಷರೆ, ಕುದುರೆಮುಖ ಗಣಿಗಾರಿಕೆ ಬಗ್ಗೆ ಕರ್ನಾಟಕ ಯಾವ ನಿಲುವನ್ನು ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಇಡೀ ದೇಶವೇ ಇಂದು ಕುತೂಹಲದಿಂದ ನೋಡುತ್ತಿದೆ. ಈ ಹಿಂದೆ ಮುಖ್ಯಮಂತ್ರಿಗಳು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆಯನ್ನು ಯಾವುದೇ ಕಾರಣದಿಂದ ಪ್ರೋತ್ಸಾಹಿಸುವುದಿಲ್ಲವೆನ್ನುವ ರಚನಾತ್ಮಕವಾದ ಪಾಸಿಟಿವ್ ಸಂದೇಶವನ್ನು ದೇಶದ ಜನರಿಗೆ ಕಳುಹಿಸಿದ್ದಾರೆ. ಈ ಸಂದೇಶವನ್ನು ಅವರು ಭವಿಷ್ಯಕ್ಕೋಸ್ಕರವಾಗಿ ಮತ್ತು ಮುಂದಿನ ಜನಾಂಗಕ್ಕೋಸ್ಕರವಾಗಿ ಉತ್ತಮವಾದ ಪರಿಸರ ನಿರ್ಮಾಣಕ್ಕೆ ಕಳುಹಿಸಿದ್ದಾರೆಂದು ಎಲ್ಲಾ ಪರಿಸರ ಸಂಘಟನೆಗಳವರೂ ತಿಳಿದುಕೊಂಡಿದ್ದಾರೆ. ಇಂದೂ ಕೂಡ ಅದೇ ನಿಲುವನ್ನು ತಾಳುತ್ತಾರೆಂದು ಅವರುಗಳು ತಿಳಿದುಕೊಂಡಿದ್ದಾರೆ. ಈಗಾಗಲೇ ಈ ಬಗ್ಗೆ ಬೇರೆ ಬೇರೆ ವರದಿಗಳು ಬಂದಿವೆ. ಕೆಲವು ಪತ್ರಿಕೆಗಳಲ್ಲಿ ಈಗಾಗಲೇ ಮೂರು ತಿಂಗಳೂ ಗಣಿಗಾರಿಕೆ ಮುಂದುವರೆಸಲು ರಿನ್ಯುವಲ್ ಆಗಿದೆಯೆಂದು ಬಂದಿದೆ. ಆದರೆ ನಾನು ನಂಬುತ್ತಿಲ್ಲ. ಏಕೆಂದರೆ ಇದುವರೆಗೆ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ನಿಲುವು ರಚನಾತ್ಮಕವಾಗಿಯೇ ಇದೆ. ಇಂದೂ ಕೂಡ ಅದೇ ರೀತಿಯ ಐತಿಹಾಸಿಕ ನಿಲುವನ್ನು ತೆಗೆದುಕೊಳ್ಳುತ್ತಾರೆನ್ನುವ ವಿಶ್ವಾಸ ನನಗಿದೆಯೆಂದು ಹೇಳಿ ಸರ್ಕಾರ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಕುದುರೆಮುಖ ಕಂಪನಿಯನ್ನು ಮುಂದುವರೆಸುವ ಬಗ್ಗೆ ರಾಜ್ಯದಲ್ಲಿ ಪರಿಸರವಾದಿಗಳು ಮತ್ತು ಅನೇಕ ಜನ ಪ್ರತಿನಿಧಿಗಳು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಕಳೆದ 30 ವರ್ಷಗಳಿಂದ ಗಣಿಗಾರಿಕೆ ಮಾಡುತ್ತಿರುವ ಕುದುರೆಮುಖ ಕಂಪನಿಯವರು ಗಣಿಗಾರಿಕೆ ಮುಕ್ತಾಯವಾಗುವ ಒಂದು ವರ್ಷಕ್ಕೆ ಮುಂಚೆಯೇ ಅಂದರೆ 1998ರಲ್ಲಿ ನಿಯಮಗಳ ಪ್ರಕಾರ ಗಣಿಗಾರಿಕೆಗೆ ರಿನ್ಯುವಲ್ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಅರ್ಜಿಯನ್ನು ಹಾಕಿದ್ದಾರೆ. ಅವರು ಕೊಟ್ಟ ಅರ್ಜಿಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವ ಜವಾಬ್ದಾರಿಯನ್ನು ಮಾತ್ರ ಹೊಂದಿರುತ್ತದೆ. ಅರ್ಜಿಯನ್ನು ಕಳುಹಿಸಿಕೊಟ್ಟ ಮೇಲೆ ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್ ಹಾಗೂ ಫಾರೆಸ್ಟ್ ಎನ್‌ವಿರೋನ್‌ಮೆಂಟಲ್ ಕ್ಲಿಯರೆನ್ಸ್‌ನ ಕಾನೂನುಗಳು ಏನಿದ್ದರೂ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತವೆ. ಅವರು ತೀರ್ಮಾನವನ್ನು ಈ ಬಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಕಳುಹಿಸಿಕೊಟ್ಟಾಗ ಕೇಂದ್ರವು ತಾತ್ಕಾಲಿಕವಾಗಿ ಒಂದು ವರ್ಷಕ್ಕೆ ಗಣಿಗಾರಿಕೆ ಮುಂದುವರೆಸಲು ಹೇಳಿದರು. ಇದಾದ ಮೇಲೆ ಮತ್ತೆ ಒಂದು ವರ್ಷಕ್ಕೆ ಮುಂದುವರೆಸಿದರು. ಈಗ ಈ ತಿಂಗಳ 24ನೇ ತಾರೀಖಿಗೆ ಕಂಪನಿಯ ಗಣಿಗಾರಿಕೆ ಕಾರ್ಯದ ಅವಧಿ ಮುಗಿಯುತ್ತಿತ್ತು. ಇಂಥ ಸಂದರ್ಭದಲ್ಲಿ ಮತ್ತೆ ಮೂರು ತಿಂಗಳ ಕಾಲ ಗಣಿಗಾರಿಕೆ ಮುಂದುವರೆಸಲು ಹೇಳಿದ್ದಾರೆಂದು ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ಆದರೆ ಅಧಿಕೃತವಾಗಿ ಆ ಪ್ರತಿಯ ನಕಲು ರಾಜ್ಯ ಸರ್ಕಾರಕ್ಕೆ ಇನ್ನೂ ಸೇರಿಲ್ಲ. ಬಹುಶಃ ಸೇರುತ್ತದೆ. ಈಗಾಗಲೇ ಗಣಿಗಾರಿಕೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಅನೇಕ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳು ಪರಿಸರವಾದಿಗಳ ಜೊತೆ ಚರ್ಚೆ ಮಾಡಿದ್ದಾರಲ್ಲದೆ ಕುದುರೆಮುಖ ಕಂಪನಿಯ ಅಧಿಕಾರಿಗಳ ಜೊತೆಯೂ ಕೂಡ ಚರ್ಚೆಯನ್ನು ಮಾಡಿದ್ದಾರೆ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಸರ್ಕಾರದ ಉದ್ದಿಮೆಯಾಗಿದೆ. ಅಂತರಾಷ್ಟ್ರೀಯ ಕೆಲವು ಕಟ್ಟುಪಾಡುಗಳಡಿಯಲ್ಲಿ ಕೆಲವು ಅಗ್ರಿಮೆಂಟ್‌ಗಳು ಆಗಿವೆ. ಪರಿಸರವಾದಿಗಳು ನಾಗರೀಕ ವೇದಿಕೆ ಮುಖಾಂತರ ತಮ್ಮ ಬೇಡಿಕೆಗಳನ್ನು ರಾಜ್ಯ ಹಾಗೂ ರಾಷ್ಟ್ರದ ಉಚ್ಚ ನ್ಯಾಯಾಲಯಗಳಲ್ಲಿ ಮಂಡನೆ ಮಾಡಿದ್ದಾರೆ. ಇಂದು ಈ ವಿಚಾರ ನ್ಯಾಯಾಂಗದ ಮುಂದೆ ತೀರ್ಮಾನವಾಗಲು ಹೋಗಿರತಕ್ಕಂಥ ಸಂದರ್ಭದಲ್ಲಿ ಅಲ್ಲಿಂದ ಏನು ಅಭಿಪ್ರಾಯ ಬರುತ್ತದೆ ಎನ್ನುವುದನ್ನು ತಿಳಿದುಕೊಂಡ ನಂತರವೇ ನಮ್ಮ ಅಭಿಪ್ರಾಯ ವ್ಯಕ್ತ ಮಾಡಬೇಕಾದುದು ಕರ್ತವ್ಯವಾಗಿದೆ. ಅದಕ್ಕೆ ಮೊದಲೇ ನಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವುದು ಅಷ್ಟು ಸಮಂಜಸವಲ್ಲವೆಂದು ಹೇಳಬಯಸುತ್ತೇನೆ. ನ್ಯಾಯಾಲಯದ ತೀರ್ಪು ಬಂದಮೇಲೆ ಏನು ಮಾಡಬಹುದು ಎನ್ನುವ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಕಾನೂನು ಮಂತ್ರಿಗಳು ಈಗಾಗಲೇ ಚಿಂತನೆ ಮಾಡುತ್ತಿದ್ದಾರಲ್ಲದೆ ಕಾನೂನು ಮಂತ್ರಿಗಳು ಹಾಗೂ ಅರಣ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇಲಾಖಾ ಅಧಿಕಾರಿಗಳನ್ನು ಕರೆದು ಈಗಾಗಲೇ ಇದರ ಬಗ್ಗೆ ಚರ್ಚೆ ಮಾಡಲಾಗಿದೆ. ಕುದುರೆಮುಖ ಕಂಪನಿಯ

ಪ್ರಪೋಸಲ್‌ನ್ನು ನಾನು ಈಗಾಗಲೇ ಹೇಳಿರುವಂತೆ 1999ರ ಜುಲೈ ತಿಂಗಳಿನಲ್ಲಿಯೇ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕಳುಹಿಸಿಕೊಟ್ಟಿದೆ. ಆಲ್ಲಿಂದ ಇಲ್ಲಿಯವರೆವಿಗೂ ಕೇಂದ್ರ ಸರ್ಕಾರ ಕೇವಲ ತಾತ್ಕಾಲಿಕವಾಗಿ ಗಣಿಗಾರಿಕೆಯನ್ನು ಮುಂದುವರೆಸಿಕೊಂಡು ಬಂದಿರುವುದರಿಂದ, ರಾಜ್ಯ ಸರ್ಕಾರದ ಇತಿಮಿತಿಗಳೂ ಕೂಡ ಈ ಬಗ್ಗೆ ಕಡಿಮೆ ಇರುವುದರಿಂದ ಮತ್ತು ಈ ವಿಷಯ ನ್ಯಾಯಾಂಗದ ವ್ಯಾಪ್ತಿಯಲ್ಲಿ ಕೂಡ ಇರುವುದರಿಂದ ಆಲ್ಲಿನ ತೀರ್ಮಾನಗಳು ಹೊರಬಂದ ನಂತರವೇ ಸರ್ಕಾರದ ಅಭಿಪ್ರಾಯವನ್ನು ವ್ಯಕ್ತಮಾಡುವುಒಕ್ಕೆ ಸಾಧ್ಯವಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):— ಮಾನ್ಯ ಸಚಿವರು ಹೇಳಿದ ಹಾಗೆ ಇದರಲ್ಲಿ ಯಾವುದೇ ಸಬ್‌ಜ್ಯುಡೀಸ್ ಆಗುವುದಕ್ಕೆ ಕಾರಣವಿಲ್ಲ. ಯಾವುದೇ ಮಧ್ಯಂತರ ತೀರ್ಪು ಕೂಡ ಆಗಿಲ್ಲ. ಈಗಾಗಲೇ ರಾಜ್ಯ ಸರ್ಕಾರದ ಜೊತೆ ಪರಿಸರ ವಾದಿಗಳು ಮಾತನಾಡಿದ್ದಾರಲ್ಲದೆ ಮಾನ್ಯ ಮುಖ್ಯಮಂತ್ರಿಗಳಂತೂ ಇದರ ಬಗ್ಗೆ ಬಹಳ ಗಂಭೀರವಾದ ನಿಲುವನ್ನು ಅವೊತ್ತಿನ ದಿನ ತೆಗೆದುಕೊಂಡಿದ್ದಾರೆ. ಇವೊತ್ತು ಏಕೆ ವ್ಯತ್ಯಾಸವಾಯಿತೋ ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಜೊತೆ ನಮ್ಮ ರಾಜ್ಯದಲ್ಲಿ ಇಂಥ ಒಂದು ಪರಿಸ್ಥಿತಿ ಇದೆ ಎಂದು ಮಾತನಾಡಬೇಕು. ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್‌ನಡಿಯಲ್ಲಿ ಫಾರೆಸ್ಟ್ ಇಲಾಖೆ ನೆಗಟಿವ್ ಆದಂಥ ವರದಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಕೊಟ್ಟರೂ ಕೂಡ ಈಗಾಗಲೇ ರಾಜ್ಯ ಸರ್ಕಾರ ಆ ಗಣಿಗಾರಿಕೆಯನ್ನು ಮಾಡುವ ಸಲುವಾಗಿ 3700ಕ್ಕಿಂತ ಹೆಚ್ಚು ಹೆಕ್ಟೇರ್ ಪ್ರದೇಶವನ್ನು ಡಿ-ನೋಟಿಫಿಕೇಷನ್ ಮಾಡಿದ್ದೀರಿ. ಇದು ಆ ಗಣಿಗಾರಿಕೆಯನ್ನು ಮುಂದುವರೆಸುವ ದೃಷ್ಟಿಯಿಂದ ಮಾಡಿದ್ದೀರಿ. ಸುಪ್ರೀಂ ಕೋರ್ಟಿನ ಆದೇಶಕ್ಕೆ ಅದನ್ನು ನುಣುಚಿಕೊಳ್ಳುವ ದೃಷ್ಟಿಯಿಂದ ಇದನ್ನು ಮಾಡಿದ್ದೀರಿ. ನಾನು ಹೇಳುವುದು ಏನೆಂದರೆ ನಾವೆಲ್ಲಾ ಪಶ್ಚಿಮ ಘಟ್ಟದ ತಪ್ಪಲಿನ ಪ್ರದೇಶಗಳಿಂದ ಬಂದಿರುವ ಶಾಸಕರುಗಳಾಗಿದ್ದೇವೆ. ಆ ಭಾಗದ ಜನರ ಭಾವನೆಯನ್ನು ನಾವು ಸದನದಲ್ಲಿ ವ್ಯಕ್ತಮಾಡಿದ್ದೇವೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಇದರ ಬಗ್ಗೆ ಸಮಜಾಯಿಷಿಯನ್ನು ಕೊಡಬೇಕೆಂದು ಆ ಮೂಲಕ ಆ ಜನರಿಗೆ ಸಮಾಧಾನಕರವಾದ ಉತ್ತರವನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ ಮುಂದಿನ ಭಾವಿಜನಾಂಗದ ಹಾಗೂ ಭವಿಷ್ಯದ ದೃಷ್ಟಿಯಿಂದ ಮತ್ತು ನಮ್ಮ ಪರಿಸರದ ದೃಷ್ಟಿಯಿಂದ ನಾವೆಲ್ಲರೂ ಕೂಡ ಮೇಲ್ಪಟ್ಟದ ಯೋಚನೆಯನ್ನು ಮಾಡಲೇಬೇಕಾಗುತ್ತದೆಂದು ತಿಳಿಸುತ್ತಾ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಒಂದು ಸಮಜಾಯಿಷಿಯನ್ನು ಇದಕ್ಕೆ ಕೊಡಬೇಕೆಂದು ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಗಣಿಗಾರಿಕೆಗೆ ರಿನ್ಯುವಲ್ ಮಾಡಬಾರದೆಂದು ಕೇಂದ್ರಕ್ಕೆ ಶಿಫಾರಸ್ಸು ಮಾಡಿದರೆ ಅದು ಗಟ್ಟಿ ನಿಲುವಾಗುತ್ತದೆ ಕೇಂದ್ರ ಸರ್ಕಾರ ಏನು ಮಾಡುತ್ತದೆ ಎನ್ನುವುದು ಗೊತ್ತಿಲ್ಲದಿದ್ದರೂ ಕೇಂದ್ರ ಸರ್ಕಾರವನ್ನು ಕನ್‌ವಿನ್ಸ್ ಮಾಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಗಣಿಗಾರಿಕೆ ಸಚವರಿಗೆ ಉತ್ತರ ಹೇಳಲು ಕೈ ತೋರಿಸಿ ಸುಮ್ಮನೆ ಕುಳಿತುಕೊಳ್ಳಬಾರದೆಂದು ನನ್ನ ಮನವಿ. ಸರ್ಕಾರದ ನಿಲುವನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಬೇಕೆಂದು

12.30 ಪಿ.ಎಂ.

ನಾನು ಆಗ್ರಹಪಡಿಸುತ್ತೇನೆ. ಜನ ಇವತ್ತು ಪರಿಸರ ರಕ್ಷಣೆಗೋಸ್ಕರವಾಗಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಇಂತಹ ಒಂದು...

MR. SPEAKER :— I cannot compel the Government to answer by the Chief Minister or the Minister. ಸರ್ಕಾರದ ಪರವಾಗಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ಆ ಭಾಗದ ಜನಪ್ರತಿನಿಧಿಗಳ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರಿಸಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇವೆ.

ಶ್ರೀ ವಿ. ಮುನಿಯಪ್ಪ :— ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಇದರ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಕುದುರೆಮುಖ ಕಂಪನಿಯವರು ಹೊಸದಾಗಿ ವಿಸ್ತರಣೆ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಅರ್ಜಿ ಹಾಕಿದ್ದಾರೆ. ಅವರು ಅರ್ಜಿ ಹಾಕಿರುವಂತಹ ಗಂಗಡಿಕಲ್ಲು, ನೆಲ್ಲಿಬೀಡು ಹೊಸ ಪ್ರದೇಶಗಳಿಗೆ ನಾವು ಯಾವುದೇ ಕಾರಣಕ್ಕೂ ಗಣಿಗಾರಿಕೆಗೆ ಅವಕಾಶ ಕೊಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಕುದುರೆಮುಖ ಕಂಪನಿಗೆ ಇವತ್ತು ರಿನಿವಲ್ ಮಾಡಿಕೊಡುವುದಿಲ್ಲವೆಂದು ಹೇಳಿ.

(ಗೊಂದಲ)

ಅಧ್ಯಕ್ಷರು :— ಅದನ್ನು ಕೇಂದ್ರ ಸರ್ಕಾರ ಮಾಡಿರುವುದು. ಇವರು ಏನು ಮಾಡಿದ್ದಾರೆ?

ಶ್ರೀ ಅರಗ ಜ್ಞಾನೇಂದ್ರ :— ರಾಜ್ಯ ಸರ್ಕಾರ ಪರಿಸರ ವಿರೋಧಿ ನೀತಿಯನ್ನು ತಾಳುತ್ತಿದೆ. ತನ್ನ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದೆ. ಪರಿಸರವಾದಿಗಳು ಮತ್ತು ಜನರ ಭಾವನೆಗಳಿಗೆ ವ್ಯತಿರಿಕ್ತವಾಗಿ ಸರ್ಕಾರ ವರ್ತನೆ ಮಾಡುತ್ತಿದೆ. ನಾವು ಪಶ್ಚಿಮಘಟ್ಟದ ಪ್ರದೇಶದಿಂದ ಬಂದಂತಹ ಶಾಸಕರು, ಇದನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಅರಗ ಜ್ಞಾನೇಂದ್ರ ಹಾಗೂ ವಿಶ್ವೇಶ್ವರ ಹೆಗಡೆ ಕೆ. ಇವರು ಸಭಾತ್ಯಾಗ ಮಾಡಿದರು)

ಒಬ್ಬ ಮಾನ್ಯ ಸದಸ್ಯರು :— ಮಾನ್ಯ ಅಧ್ಯಕ್ಷರೆ, ಒಳ್ಳೆಯದಾದರೆ ನಮ್ಮಿಂದ ಆಯಿತು ಎಂದು ಹೇಳುತ್ತಾರೆ. ಕೆಟ್ಟದ್ದಾದರೆ ನಮ್ಮಿಂದ ಅಲ್ಲ ಎನ್ನುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :— ಮಾನ್ಯ ಅಧ್ಯಕ್ಷರೆ, ಬಿಜೆಪಿ ಸದಸ್ಯರು ಕೆಲವರು ಹೊರಗೆ ಹೋಗುತ್ತಾರೆ. ಇನ್ನು ಅರ್ಧ ಸದಸ್ಯರು ಇಲ್ಲೇ ಇದ್ದಾರೆ.

ಅಧ್ಯಕ್ಷರು :— ಅದು ನಮಗೆ ಏಕೆ ಬೇಕು? ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ಈಗ ಜ್ಯೂನಿಯರ್ ಡಾಕ್ಟರ್ಸ್ ಮುಷ್ಕರದ ಬಗ್ಗೆ ಸಿಂಧ್ಯರವರೇ ಮಾತನಾಡಿ.

ವಿಷಯ (ಅ) ರಾಜ್ಯದಲ್ಲಿ ಜ್ಯೂನಿಯರ್ ಡಾಕ್ಟರುಗಳು ನಡೆಸುತ್ತಿರುವ ಮುಷ್ಕರದಿಂದ ರೋಗಿಗಳಿಗೆ ಆಗುತ್ತಿರುವ ತೊಂದರೆ ಬಗ್ಗೆ

+ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಸುಮಾರು ಹತ್ತು ಸಾವಿರ ಜನ ಜ್ಯೂನಿಯರ್ ಡಾಕ್ಟರುಗಳು ಸರ್ಕಾರದ ಗಮನಕ್ಕೆ ಕೆಲವು ಬೇಡಿಕೆಗಳನ್ನು ತಂದು ಹದಿನೈದು ದಿವಸಗಳಿಂದಲೂ ಕಪ್ಪು ಪಟ್ಟಿಯನ್ನು ಧರಿಸಿ ಮುಷ್ಕರವನ್ನು ಮಾಡುತ್ತಿದ್ದಾರೆ. ನಿನ್ನೆಯಿಂದ ಅವರು ತುರ್ತು ಚಿಕಿತ್ಸೆಯನ್ನು ಸಹ ನಿಲ್ಲಿಸಿ ಮುಷ್ಕರವನ್ನು ಮಾಡುತ್ತಿದ್ದಾರೆ. ಆದುದರಿಂದ ಬೆಂಗಳೂರಿನಲ್ಲಿ ಇರತಕ್ಕಂಥ ವಿಕ್ಟೋರಿಯ, ಬೋರಿಂಗ್ ಹಾಗೂ ರಾಜ್ಯದಲ್ಲಿನ ಬಳ್ಳಾರಿ ಮತ್ತು ಗುಲ್ಬರ್ಗದಲ್ಲಿ ಮೆಡಿಕಲ್ ಕಾಲೇಜುಗಳಿಗೆ ಅಟ್ಯಾಚ್ ಆಗಿರುವಂತಹ ಎಲ್ಲಾ ಆಸ್ಪತ್ರೆಗಳಲ್ಲಿ ಇದರಿಂದ ರೋಗಿಗಳಿಗೆ ತುಂಬಾ ತೊಂದರೆಯಾಗಿದೆ. ರೋಗಿಗಳು ಯಾರು ಹಳ್ಳಿಗಳಿಂದ ಬರುತ್ತಾರೆ, ಎಮರ್ಜೆನ್ಸಿ ಕೇಸುಗಳು ಏನಿರುತ್ತವೆ, ಅವರು ಖರ್ಚು ಮಾಡಿಕೊಂಡು ಬಂದವರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ಸರ್ಕಾರ ಮುಷ್ಕರ ಮಾಡುವವರನ್ನು ಕರೆಸಿ ಮಾತನಾಡಿದೆಯಾ? ಅವರ ಬೇಡಿಕೆಗಳೇನು? ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನಾದರೂ ಮಾತನಾಡಿದ್ದಾರಾ? ಅವರ ಪ್ರಮುಖವಾದಂತಹ ಬೇಡಿಕೆಗಳೇನು? ಅದನ್ನು ಈಡೇರಿಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗುವುದಿಲ್ಲವೆ? ಇದಕ್ಕೆ ಏನು ಪರ್ಯಾಯ ವ್ಯವಸ್ಥೆ ಮಾಡಿದೆ ಎಂಬುದು ಗೊತ್ತಾಗಬೇಕು. ನಿನ್ನೆ ಮಾನ್ಯ ಮಂತ್ರಿಗಳು ಮಾತನಾಡುವಂತಹ ಸಂದರ್ಭದಲ್ಲಿ, ನಾನು ಅವರನ್ನು ಕರೆಸಿ ಮಾತನಾಡಿದ್ದೇನೆ, ಆದರೆ ಆ ಸಮಸ್ಯೆ ಬಗೆಹರಿಯುವ ಹಾಗೆ ಕಾಣುವುದಿಲ್ಲ. ಅದಕ್ಕೋಸ್ಕರ ಆಲ್ಟರ್ನೇಟೀವ್ ಅರೇಂಜ್‌ಮೆಂಟ್ ಮಾಡಿದ್ದೇನೆ ಎನ್ನುವ ಮಾತನ್ನೂ ಸಹ ಹೇಳಿದ್ದಾರೆ. ಆದರೆ ಪರ್ಯಾಯ ವ್ಯವಸ್ಥೆ ಏನೂ ಮಾಡಿದ ಹಾಗೆ ಕಾಣುವುದಿಲ್ಲ. ಬಂದಿರುವ

ಸುದ್ದಿಗಳ ಪ್ರಕಾರ ಸೀನಿಯರ್ ಮತ್ತು ಜೂನಿಯರ್ ಡಾಕ್ಟರ್‌ಗಳು ಕೆಲವು ಕಡೆ ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾತ್ರ ಕೆಲಸ ಮಾಡುತ್ತಿದ್ದಾರೆಯೇ ವಿನಃ ಬಹುತೇಕ ಆಸ್ಪತ್ರೆಗಳು ಪ್ಯಾರಲೈಸ್ ಆಗಿವೆ. ಇಂತಹ ಸನ್ನಿವೇಶದಲ್ಲಿ ಸರ್ಕಾರ ಬಡರೋಗಿಗಳ ರಕ್ಷಣೆಗೆ ಬರಬೇಕಾಗುತ್ತದೆ. ತುರ್ತಾಗಿ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ. ನಾನು ಹೇಳುವುದೇನೆಂದರೆ ಅವರ ಬೇಡಿಕೆಗಳು ಏನಿವೆ, ಆ ಬೇಡಿಕೆಗಳ ವಿಚಾರದಲ್ಲಿ ಸರ್ಕಾರ ಪರಿಶೀಲನೆ ಮಾಡತಕ್ಕಂಥ ಭರವಸೆಯನ್ನು ಕೊಡಬಹುದು. ನನಗೆ ಗೊತ್ತಿದ್ದ ಹಾಗೆ ಅವರು ಇಂಟರ್ನ್ಸ್ ನಮಗೆ ಸ್ವಲ್ಪ ಸ್ಟೈಫಂಡ್ ಜಾಸ್ತಿ ಮಾಡಿ ಎಂದು ಬೇಡಿಕೆಯನ್ನು ಇಟ್ಟಿದ್ದಾರೆ. ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಇರತಕ್ಕಂಥ ಫೈನಲ್ ಇಯರ್ ಕೋರ್ಸ್ ಕಂಪ್ಲೀಟ್ ಮಾಡಿರತಕ್ಕಂಥ ಡಾಕ್ಟರುಗಳು ಏನಿದ್ದಾರೆ, ಅವರೂ ಸಹ ಹಣವನ್ನು ಹೆಚ್ಚು ಮಾಡಿ ಎಂದು ಕೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿದರೆ ಬಹುಶಃ ಅವರು ಮುಷ್ಕರವನ್ನು ವಾಪಸ್ಸು ಪಡೆಯಬಹುದು, ಇಲ್ಲದೆ ಇದ್ದರೆ ಬಹಳ ತೊಂದರೆಯಾಗುತ್ತದೆ. ಒಂದು ಸಂತೋಷದ ವಿಚಾರವೇನೆಂದರೆ ಗೌರವಾನ್ವಿತ ಸದಸ್ಯರಾದ ಸುರೇಶ್ ಕುಮಾರ್ ಹಾಗೂ ಇತರ ಸದಸ್ಯರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರತಕ್ಕಂಥ ಶವಾಗಾರದ ಬಗ್ಗೆ ಇಲ್ಲಿ ಚರ್ಚೆ ಮಾಡಿದರು. ಆದಾದ ಮೇಲೆ ಲೋಕಾಯುಕ್ತದವರು ನಿನ್ನೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಅದಕ್ಕೆ ಸ್ಪಂದಿಸಿದ್ದಾರೆ. Definitely it will have a lot of impact on the administration, ನಾನು ಲೋಕಾಯುಕ್ತದವರು ಮಾಡಿರತಕ್ಕಂಥ ಕ್ರಮವನ್ನು ಸ್ವಾಗತ ಮಾಡುತ್ತೇನೆ ಹಾಗೂ ಮೆಚ್ಚುತ್ತೇನೆ. ಸರ್ಕಾರದ ಆಡಳಿತ ಯಂತ್ರದಲ್ಲಿ ಒಳ್ಳೆಯ ಜನ ಇದ್ದಾರೆ. ಒಳ್ಳೆಯ ಜನರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಮತ್ತು ಯಾರು ಕೆಲಸ ಮಾಡುವುದಿಲ್ಲ, ಯಾರು ಅಕ್ರಮವಾಗಿ ಅಲ್ಲಿ ಇದ್ದಾರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಕೆಲಸ ಮಾಡಬೇಕಾಗುತ್ತದೆ. ಲೋಕಾಯುಕ್ತದವರು ಮಾಡಿರತಕ್ಕಂಥ ಕ್ರಮ ಸರಿ ಇದೆ. ನಾನು ಏಕೆ ಇದನ್ನು ಉದಾಹರಣೆಯಾಗಿ ಕೊಟ್ಟೆ ಎಂದರೆ ವಿಕ್ಟೋರಿಯಾ ಹಾಗೂ ಬೋರಿಂಗ್ ಆಸ್ಪತ್ರೆ ಹಾಗೂ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಬಹಳ ತೊಂದರೆ ಇದೆ. ನಿಮ್ಮ ಸರ್ಕಾರ ಬಂದಮೇಲೆ ಯೂಸರ್ಸ್ ಫೀ ಅನ್ನು ಜಾಸ್ತಿ ಮಾಡಿದ್ದೀರಿ. ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ ಅದರ ನೆಪದಲ್ಲಿ ಇವತ್ತು ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿರತಕ್ಕಂಥ ನರಕಯಾತನೆ, ಹಿಂಸೆ ಅಲ್ಲಿ ಅನುಭವಿಸಿದವರಿಗೆ ಗೊತ್ತಾಗುತ್ತದೆ. ಆ ಆಸ್ಪತ್ರೆಗೆ ಹೋಗಬೇಕಾದರೆ ಶಿಫಾರಸ್ಸು ಇಲ್ಲದೆ ಹೋದರೆ ಅಥವಾ ಅಲ್ಲಿಗೆ ಯಾರನ್ನಾದರೂ ಕರೆದುಕೊಂಡು ಹೋಗದೆ ಇದ್ದರೆ ಸರಿಯಾದ ಚಿಕಿತ್ಸೆ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಜೂನಿಯರ್ ಡಾಕ್ಟರುಗಳು ಅಜಿಟೇಷನ್ ಮಾಡುತ್ತಿರುವಂತಹ ಕಾಲದಲ್ಲಿ ಸರ್ಕಾರ ಏನು ಮಾಡಬೇಕೆಂದು ಇದೆ. ಅದನ್ನು ಸರ್ಕಾರ ಬಗೆಹರಿಸಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಆಗ್ರಹ ಪಡಿಸುತ್ತೇನೆ.

+ ಶ್ರೀ ಕೈಲಾಸ್‌ನಾಥ್ ಪಾಟೀಲ್ (ಚಿಂಚೋಳಿ) :— ಮಾನ್ಯ ಅಧ್ಯಕ್ಷರೆ, ಜೂನಿಯರ್ ಡಾಕ್ಟರ್‌ಗಳ ಮುಷ್ಕರ ನಿನ್ನೆಯಿಂದ ಪ್ರಾರಂಭವಾಗಿದೆ, ಅವರು ಏನು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ ಸರ್ಕಾರದ ಮುಂದೆ, ಅದರಲ್ಲಿ ಒಂದೆರಡು ಬೇಡಿಕೆಗಳ ಬಗ್ಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಒಂದು ಪ್ರಮುಖವಾದ ಬೇಡಿಕೆ ಏನಿದೆ ಎಂದರೆ 'ಕಂಪಲ್ಸರಿ ರೂರಲ್ ಸರ್ವೀಸ್' ಬಗ್ಗೆ ಹೇಳಿದ್ದಾರೆ. ಅದನ್ನು ಎಂಬಿಬಿಎಸ್ ಆದತಕ್ಷಣ ಕಂಪಲ್ಸರಿ ರೂರಲ್ ಸರ್ವೀಸ್ ಎನ್ನುವುದನ್ನು ಬಿಟ್ಟು ಪಿ.ಜಿ ಆದ ಮೇಲೆ ಮಾಡುವುದು ಉತ್ತಮ ಎನ್ನುವ ವಿಚಾರವನ್ನು ಜೂನಿಯರ್ ಡಾಕ್ಟರ್ ಅಸೋಸಿಯೇಷನ್‌ರವರು ಹೇಳಿದ್ದಾರೆ. ಅದು ಗಮನದಲ್ಲಿ ತೆಗೆದುಕೊಳ್ಳಬೇಕಾದಂತಹ ವಿಷಯ. ಏಕೆಂದರೆ ಇವತ್ತಿನ ದಿವಸ ವಿದ್ಯಾಭ್ಯಾಸದ ಮಟ್ಟದಲ್ಲಿ ಎಂಬಿಬಿಎಸ್ ಪಾಸ್ ಆದವರಿಗೆ ಅಷ್ಟೊಂದು ಅನುಭವವಿರುವುದಿಲ್ಲ ಮತ್ತು ಅವರಿಂದ ಯಾವುದೇ ರೀತಿಯಿಂದ ಒಳ್ಳೆಯ ಕೆಲಸ ನಮ್ಮ ಹಳ್ಳಿಗಳಲ್ಲಿ ಆಗುತ್ತದೆ ಎನ್ನುವ ವಿಚಾರದಲ್ಲಿ ನನಗೆ ಅನುಮಾನ ಬರುತ್ತದೆ. ಇವತ್ತು ಹೇಗಿದ್ದರೂ ನಮ್ಮ ಹಳ್ಳಿಗಳಲ್ಲಿ ಇರುವಂತಹ ಆಸ್ಪತ್ರೆಗಳಿಗೆ ಡಾಕ್ಟರುಗಳು ವಿಶೇಷವಾಗಿ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅದನ್ನು ನಾವು ಕಂಪಲ್ಸರಿಯಾಗಿ ಮಾಡಿ ಅವರಿಗೆ ಎಂಬಿಬಿಎಸ್ ಆದತಕ್ಷಣ ಅಲ್ಲಿಗೆ ಕಳುಹಿಸಿಕೊಟ್ಟರೆ ಅವರು ಅಷ್ಟು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಮತ್ತು ಅವರ ವಿದ್ಯಾರ್ಹತೆ ಮೇಲೆ ಅಲ್ಲಿರತಕ್ಕಂಥ ಗ್ರಾಮೀಣ ಜನರಿಗೆ ಎಂತಹ ಸೇವೆ ಸಿಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಅದೂ ಅಲ್ಲದೆ ಪ್ರತಿ ವರ್ಷ ನಮ್ಮ ರಾಜ್ಯದಿಂದ ಹತ್ತು ಸಾವಿರ ಡಾಕ್ಟರುಗಳು ಪಾಸಾಗಿ ಹೊರಗಡೆ ಬರುತ್ತಿದ್ದಾರೆ. ಆ ಹತ್ತು ಸಾವಿರ ಡಾಕ್ಟರುಗಳಿಗೆ ನಾವು ಉದ್ಯೋಗ ಒದಗಿಸುವಂತಹ ಅವಕಾಶ ನಮ್ಮಲ್ಲಿ ಇಲ್ಲ. ನಮ್ಮಲ್ಲಿರುವಂತಹ ಪಿ.ಹೆಚ್.ಸಿ. ಆಸ್ಪತ್ರೆಗಳನ್ನು ನೋಡಿದರೆ ಹತ್ತು ಸಾವಿರ ಡಾಕ್ಟರುಗಳಿಗೆ ಉದ್ಯೋಗ ಕೊಡುವ ಸ್ಥಿತಿಯಲ್ಲಿ ಇಲ್ಲ. ಆದುದರಿಂದ ಪಿ.ಜಿ. ಮಾಡುತ್ತಿರುವವರು ಸ್ಪೇಬಲ್ ಆಗಿ ಒಂದೂವರೆ ಸಾವಿರ ಡಾಕ್ಟರುಗಳು ಹೊರಗಡೆ ಬರುತ್ತಿದ್ದಾರೆ. ಅಂತಹವರಿಗೆ ಗ್ರಾಮೀಣ ಪ್ರದೇಶಗಳಿಗೆ ಹೋಗಿ ಕೆಲಸ ಮಾಡುವಂತಹ ಅವಕಾಶ ಮಾಡಿಕೊಟ್ಟರೆ ಹಳ್ಳಿಯಲ್ಲಿ ಇರತಕ್ಕಂಥ ಜನರಿಗೆ ಒಳ್ಳೆಯ ವೈದ್ಯಕೀಯ ಸೇವೆ ಕೊಟ್ಟಹಾಗೆ ಆಗುತ್ತದೆ. ಹಾಗೂ ಹೆಚ್ಚಿನ ಅನುದಾನ ಕೊಟ್ಟು ಹಳ್ಳಿಯಲ್ಲಿರತಕ್ಕಂಥ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒದಗಿಸಿಕೊಟ್ಟು ಪಿ.ಜಿ. ಮಾಡಿರುವವರು ಅಲ್ಲಿ ಹೋಗಿ ಕೆಲಸ ಮಾಡಿದರೆ ಒಳ್ಳೆಯ ಸೇವೆಯನ್ನು ಒದಗಿಸುವುದಕ್ಕೆ ಅವಕಾಶವಾಗುತ್ತದೆ. ಆದಾದನಂತರ ಇನ್ನೊಂದು ಗುರುತರವಾದ ಅಪಾದನೆ ಎಂದರೆ ನಮ್ಮ ಜೂನಿಯರ್ ಡಾಕ್ಟರ್‌ಗಳು ಹೇಳಿರುವಂತೆ ನಮ್ಮ ರಾಜ್ಯದಲ್ಲಿ 80 ಸಾವಿರ ಜನ ನಕಲಿ ಡಾಕ್ಟರುಗಳಿದ್ದಾರೆ ಎಂದು ಹೇಳಿದ್ದಾರೆ. ಇವರು ಎಲ್ಲೆಲ್ಲಿ ಇದ್ದಾರೆ? ಯಾರ್ಯಾರು ಇವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ? ಇವರಿಂದ ಎಷ್ಟು ಪ್ರಾಣಹಾನಿಯಾಗುತ್ತಿದೆ ಎನ್ನುವುದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ. 80 ಸಾವಿರ ಜನ ನಕಲು ಡಾಕ್ಟರರಿದ್ದಾರೆ

ಎಂದರೆ ರಾಜ್ಯದಲ್ಲಿ ಇವರನ್ನು ಗುರುತಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಇಂತಹವರಿಗೆ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು ಎನ್ನುವುದನ್ನು ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಜೂನಿಯರ್ ಡಾಕ್ಟರುಗಳು ಏನು ಚಳುವಳಿ ಪ್ರಾರಂಭವಾಗಿದೆ ಅದರ ಬಗ್ಗೆ ಹೇಳುವುದಾದರೆ ಒಂದು ಗಾದೆ ಇದೆ. When two elephants fight, it is the grass that suffers. It is the grass that suffers. ಹಾಗಾಗಿದೆ, ಇವತ್ತು ನಮ್ಮ ರೋಗಿಗಳ ಪರಿಸ್ಥಿತಿ. ಇವತ್ತು ಸರ್ಕಾರ ಒಂದು ಆನೆ, ಆ ಜೂನಿಯರ್ ಡಾಕ್ಟರುಗಳು ಒಂದು ಆನೆ, ಇವೆರಡರ ಕಿತ್ತಾಟದಲ್ಲಿ ಅನುಭವಿಸುತ್ತಿರುವವರು ಬಡರೋಗಿಗಳು. ನಾವ್ಯಾರಾದರೂ ಕೂಡ ಈ ರೀತಿಯ ಚಳುವಳಿಗೆ ಎಷ್ಟರಮಟ್ಟಿಗೆ ಪ್ರೋತ್ಸಾಹ ಕೊಡಬೇಕೆನ್ನುವುದನ್ನು ಯೋಚನೆ ಮಾಡಬೇಕು. ನಾವು ಪತ್ರಿಕೆಗಳನ್ನು ನೋಡಿದಾಗ ಅದರಲ್ಲಿ ಬಡರೋಗಿಗಳ ಫೋಟೋಗಳೇ ಮೊದಲು ಬರುವಂಥಾದ್ದು. ಅವರಿಗೆ ಈ ರೀತಿಯ ಕಷ್ಟ ಬಂದಾಗ ಇನ್ನೆಷ್ಟು ಕಷ್ಟವನ್ನು, ತೊಂದರೆಯನ್ನು ಅನುಭವಿಸುತ್ತಾರೆಂಬುದನ್ನು ನಾವು ಯೋಚನೆ ಮಾಡಬೇಕು. ಮಾನ್ಯ ಸಚಿವರು ಎರಡು ಬಾರಿ ಆ ಜೂನಿಯರ್ ಡಾಕ್ಟರ್‌ಗಳನ್ನು ಕರೆದು ಮಾತನಾಡಿದ್ದೇನೆಂದು ಹೇಳಿದ್ದಾರೆ. ಅವರು ಬಹಳ adamant ಆಗಿದ್ದಾರೆ; ಬಹಳ rigid ಆಗಿದ್ದಾರೆಂದು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಯಾರೇ ಆಗಲಿ ಅಡಮೆಂಟ್ ಆಗಿರುತ್ತಾರೆ. ಈ ವಿಷಯವಾಗಿ ಹೇಳಬೇಕೆಂದರೆ ಉದಾಹರಣೆಗೆ ನೀವೇ ಸೃಷ್ಟಿಸಿದಂತಹ task force ಅದರಲ್ಲಿ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ.

> ``The issuing of essentiality certificate by the Government and affiliation by the University for new Medical, Dental, Nursing, Pharmacy & Physio-therapy Colleges should be stopped for the next three years."

ಮೂರು ವರ್ಷಗಳ ಕಾಲ ಯಾವುದಕ್ಕೂ ಕೊಡಬಾರದೆಂದು ಹೇಳಿದ್ದಾರೆ. ಅದಾದ ಮೇಲೆ ನೀವೇ ಆರು ಕಾಲೇಜುಗಳಿಗೆ ಅವಕಾಶವನ್ನು ಕೊಟ್ಟಿದ್ದೀರಿ, ಅದು ಎಂತಹ ಕಾಲೇಜುಗಳಿಗೆ ಕೊಟ್ಟಿದ್ದೀರೆಂದರೆ

> "...for those colleges even though Local Inspection Committee and Syndicate of Rajiv Gandhi University of Health Sciences after thorough scrutiny has not recommended their case."

ಈ ರೀತಿ ಅವಕಾಶವಿಲ್ಲದಿದ್ದರೂ ಕೂಡ ಮತ್ತೆ ಸೂಕ್ತವಾದ ಇನ್‌ಫ್ರಾಸ್ಟ್ರಕ್ಚರ್ ಇಲ್ಲದಿದ್ದರೂ ಕೂಡ ಈ ಕಾಲೇಜುಗಳಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಇದರಿಂದಾಗಿ ಸಹಜವಾಗಿಯೇ ಡಾಕ್ಟರ್‌ಗಳಿಗೆ ಕೋಪ ಬಂದಿದೆ. ಇನ್ನು ಎರಡನೆಯದಾಗಿ, ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಯಾರ್ಯಾರು ಪಿ.ಜಿ ಕೋರ್ಸ್ಸ್ ಮಾಡುತ್ತಿದ್ದಾರೆ, ಅವರಿಗೆ ಪ್ರಾಮೀಸ್ ಮಾಡಿದಂತೆ ಸ್ಟೈಪೆಂಡ್ ಕೊಡುತ್ತಿಲ್ಲ. ಅವರು ನ್ಯಾಯವಾಗಿ ಕೊಡುವಂತಹ ಸ್ಟೈಪೆಂಡ್ ಕೊಡಿ ಎಂದು ಕೇಳುತ್ತಿದ್ದಾರೆ. ಇನ್ನು ಮೂರನೆಯದಾಗಿ ಮಾನ್ಯ ಕೈಲಾಸನಾಥ ಪಾಟೀಲ್‌ರವರು ಹೇಳಿದ ಹಾಗೆ ಪಿ.ಜಿ ಕೋರ್ಸ್ಸ್ ಆದಮೇಲೆ ಅವರನ್ನು ರೂರಲ್ ಸರ್ವೀಸ್‌ಗೆ ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರವನ್ನು ಅಗ್ರಹಿಸುವುದೇನೆಂದರೆ ಈ ರೀತಿ ಆದನ್ನು ತುಂಬಾ ದಿವಸ ಎಳೆದುಕೊಂಡು ಹೋದರೆ ಬಡ ರೋಗಿಗಳಿಗೆ ಅನ್ಯಾಯವಾಗುತ್ತದೆ, ಅವರು ತೊಂದರೆಗೆ ಒಳಗಾಗುತ್ತಾರೆ. ಈ ಡಾಕ್ಟರ್‌ಗಳು ನಾಳೆ ದಿವಸ ಇನ್ನು ಯಾವ ರೀತಿಯ ಚಳುವಳಿಯನ್ನು ಪ್ರಾರಂಭ ಮಾಡುತ್ತಾರೋ ಗೊತ್ತಿಲ್ಲ. ಇವರು ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಿದ್ದಾರೆ, ಓಪಿಡಿಯನ್ನು ನೋಡಿಕೊಳ್ಳುತ್ತಿದ್ದೇವೆಂದು ಈ ಜೂನಿಯರ್ ಡಾಕ್ಟರ್‌ಗಳು ಹೇಳಿದ್ದಾರೆ. It is a good gesture. ಇವರು ತಮ್ಮ ಬೇಡಿಕೆಗಳಿಗೆ ಪ್ರಕ್ರಿಯೆ ದೊರೆಯದಿದ್ದರೆ, ಇವರು ಎಲ್ಲಿಯವರೆಗೆ ಚಳುವಳಿಯನ್ನು ಮಾಡುತ್ತಾರೆಂಬುದು ಪ್ರಶ್ನೆಯಾಗುತ್ತದೆ. ಆದುದರಿಂದ ಸರ್ಕಾರ ಪ್ರೆಸ್ಟೀಜ್ ಮೇಲೆ ನಿಲ್ಲದೆ ಅವರ ಬೇಡಿಕೆ ಏನೇನು ಇದೆ, ಅದರಲ್ಲಿ ನ್ಯಾಯಯುತವಾಗಿ ಪರಿಹಾರ ಮಾಡಬಹುದೆಂಬುದನ್ನು ನೋಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಅವರು ಎಂಸಿಎ ರೂಲ್ಸ್ ಪ್ರಕಾರ ಏನು ಹೇಳುತ್ತಾರೆಂದರೆ ಥಿಯರಿ ಮತ್ತು ಪ್ರಾಕ್ಟಿಕಲ್ ವ್ಯಾಲ್ಯೂಯೇಟರ್ ಒಬ್ಬರೇ ಆಗಿರಬೇಕು ಎಂದು It is in the rules. ತಾವು ಅದನ್ನಾದರೂ ಮಾಡುತ್ತೇನೆಂದು ಹೇಳಬಹುದು, ಇನ್ನು ಎರಡು, ಮೂರು ಕನ್ಸೆಷನ್ ತೋರಿಸುತ್ತೇವೆಂದರೆ ಅವರು ಚಳುವಳಿಯನ್ನು ಬಿಟ್ಟು ನಿಮ್ಮ ಬಳಿಗೆ ಬಂದು ಚರ್ಚಿಸಬಹುದು. ಆ ದೃಷ್ಟಿಯಿಂದ ಸರ್ಕಾರ ಕೂಡಲೇ ಈ ಬಡ ಜನರ ಹಿತದೃಷ್ಟಿಯಿಂದ ಮತ್ತು ರೋಗಿಗಳ ಹಿತದೃಷ್ಟಿಯಿಂದ ತಾವು ಈ ಕೆಲಸವನ್ನು ಮಾಡಬೇಕಾಗುತ್ತದೆ. ನಿನ್ನೆ ದಿವಸ ಇದ್ದಂತಹ ಅನೇಕ ಎಮರ್ಜೆನ್ಸಿ ಆಪರೇಷನ್‌ಗಳನ್ನು ಪೋಸ್ಟ್‌ಪೋನ್ ಮಾಡಿದ್ದಾರೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ತಾವು ಪ್ರಿಯಾರಿಟಿಯ ಮೇಲೆ ಯಾವುದೇ ಅನಾಹುತವಾಗದ ರೀತಿಯಲ್ಲಿ ನೋಡಿಕೊಳ್ಳುವುದಕ್ಕೋಸ್ಕರ ಕೂಡಲೇ ಸರ್ಕಾರ ಮಧ್ಯೆ ಪ್ರವೇಶಿಸಿ ಇವರ ಬೇಡಿಕೆಗಳ ಕಡೆಗೆ ಗಮನವರಿಸಿ ಈ ಕಿರಿಯ ವೈದ್ಯರ ಚಳುವಳಿಯನ್ನು ನಿಲ್ಲಿಸುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ನಾನು ಅಗ್ರಹಿಸುತ್ತೇನೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೇ, ಕಳೆದ 15 ದಿವಸಗಳಿಂದ ಜೂನಿಯರ್ ಡಾಕ್ಟರ್‌ಗಳು ಕೆಲವು ಬೇಡಿಕೆಗಳನ್ನು ಇಟ್ಟುಕೊಂಡು,

ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ಟೋಕನ್ ಸ್ಟ್ರೈಕ್ ರೀತಿಯಲ್ಲಿ ಕಪ್ಪು ಪಟ್ಟಿಯನ್ನು ಹಾಕಿಕೊಂಡು ರಾಜ್ಯಾದ್ಯಂತ ಅವರು ತಮ್ಮ ಸೇವೆಯನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ನಾವು ಈ ವಿಷಯವನ್ನು ಸದನದಲ್ಲಿ ಈ ಮುಂಚೆಯೇ ಪ್ರಸ್ತಾಪ ಮಾಡಬೇಕೆಂದು ಇದ್ದೆವು. ಆ ರೀತಿ ಮಾಡಿದರೆ ಯಾವುದೋ ಒಂದು ರೀತಿಯಲ್ಲಿ ನಾವು ಅದನ್ನು ಪ್ರೇರೆಪಿಸಿದಂತೆ ಆಗುತ್ತದೆಯೋ ಏನೋ ಎಂದು ಇದ್ದೆವು. ಇದರಿಂದ ರೋಗಿಗಳಿಗೆ ಸಮಸ್ಯೆಯಾಗುತ್ತದೆಂದು ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಈ ವಿಷಯವಾಗಿ ರಾಜ್ಯ ಸರ್ಕಾರವೇ ಮುಂದೆ ಹೋಗಿ ಅವರ ಆರು ಬೇಡಿಕೆಯಲ್ಲಿ ಕೆಲವೊಂದು ಮಾತುಕತೆಯ ಮುಖಾಂತರ ಪರಿಹಾರ ಮಾಡುತ್ತಾರೆಂದು ನಿರೀಕ್ಷಣೆ ಮಾಡಿದ್ದೆವು. ಆದರೆ ಸರ್ಕಾರ ಇವತ್ತಿನವರೆಗೂ ಆ ಪ್ರಯತ್ನವನ್ನು ಮಾಡಿಲ್ಲ. ಈಗಾಗಲೇ ನಮ್ಮ ನಾಯಕರು ಹೇಳಿದ ಹಾಗೆ ಇವತ್ತು ಅವರು ಕೆಲಸಕ್ಕೆ ಹೋಗದ ಹಾಗೆ ವಾತಾವರಣ ನಿರ್ಮಾಣವಾದರೆ ಅದರಲ್ಲೂ ವಿಶೇಷವಾಗಿ ಸರ್ಕಾರಿ ಆಸ್ಪತ್ರೆಗಳಿಗೆ ಈ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವಂತಹ ಆಸ್ಪತ್ರೆಗಳಲ್ಲಿ ವೈದ್ಯಕೀಯ ಈ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಇಲ್ಲಿ ಪ್ರಮುಖವಾದಂತಹ ವಿಷಯವೆಂದರೆ ರೆಸಿಡೆನ್ಸಿ ಸ್ಕೀಮ್ ಬಹಳ ಮುಖ್ಯವಾದಂತಹ ವಿಚಾರ, ಇದು ಕಳೆದ ಎಂಟು ವರ್ಷಗಳಿಂದ ಈ ಕಿರಿಯ ವೈದ್ಯರುಗಳು ಹೇಳಿಕೊಂಡು ಬಂದಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಂತಹ ಜನತಾದಳ ಸರ್ಕಾರ ಈ ಸ್ಕೀಮ್ ತರುವಂಥಾದ್ದಕ್ಕೆ ಒಪ್ಪಿಗೆ ಇದೆಯೆಂಬ ಮಾತನ್ನು ಹೇಳಿದ್ದರು. ಇದರಿಂದ ಜೂನಿಯರ್ ಡಾಕ್ಟರ್‌ಗಳಿಗೆ ಸಹಾಯವಾಗುತ್ತದೆಂದು ಅಲ್ಲ, ಇದರಿಂದ ಏನಾಗುತ್ತದೆಂದರೆ ಈ ವೈದ್ಯಕೀಯ ಕಾಲೇಜುಗಳು ಎಲ್ಲಿ ಇರುತ್ತವೆ, ಅಲ್ಲಿ ಪಕ್ಕದಲ್ಲಿ ಈ ಡಾಕ್ಟರ್‌ಗಳು ವಾಸ ಮಾಡುವಂಥಾದ್ದಕ್ಕೆ ಯೋಗ್ಯವಾದಂತಹ ವ್ಯವಸ್ಥೆಯನ್ನು ಮಾಡುವಂಥಾದ್ದು ಆಗಿದೆ. ಈ ರೀತಿಯಾದರೆ ಇವರು 24 ಗಂಟೆಗಳ ಕಾಲ ಇರುವುದರಿಂದ ಹಿರಿಯ ವೈದ್ಯರುಗಳು ಅಪೇಕ್ಷೆಪಟ್ಟಾಗ ಕಿರಿಯ ವೈದ್ಯರುಗಳು ಬಂದು ಅವರೊಡನೆ ಆಪರೇಷನ್‌ಗಳಿಗೆ ಸಹಾಯ ಮಾಡುವಂಥಾದ್ದು ಮತ್ತು ಎಮರ್ಜೆನ್ಸಿ ಕೇಸ್‌ಗಳಲ್ಲಿ ಭಾಗವಹಿಸುವಂಥಾದ್ದಕ್ಕೆ ಅವಕಾಶವನ್ನು ಮಾಡುವಂತಹ ಸ್ಕೀಮ್ ಆಗುತ್ತದೆ. ಆದುದರಿಂದ ಈ ಸ್ಕೀಮ್ ಅನ್ನು ತರಬೇಕೆಂದು ಪಿಜಿ ಡಾಕ್ಟರ್‌ಗಳ ವಿಚಾರವಾಗಿದೆ. ಇದರಿಂದ ಇವರಿಗೆ ಅನುಭವ ಬರುತ್ತದೆಂದು ಈ ಸ್ಕೀಮ್ ಅನ್ನು ಕೇಳಿದ್ದಾರೆ. ಇದನ್ನು ಸರ್ಕಾರ ಜಾರಿಗೆ ತರುವಂಥಾದ್ದಕ್ಕೆ ಏಕೆ ಹಿಂದುಮುಂದು ನೋಡುತ್ತಿದ್ದಾರೆಂಬುದು ಇನ್ನೂ ಅರ್ಥವಾಗುತ್ತಿಲ್ಲ. ಇದು ಅವರ ಪ್ರಮುಖವಾದಂತಹ ಬೇಡಿಕೆಯಾಗಿದೆ. ಇನ್ನು ಎರಡನೆಯದಾಗಿ ಎಂಸಿಐ ನಾರ್ಮ್ಸ್ ಪ್ರಕಾರ ಅವರ ಈ ಎರಡನೇ ಬೇಡಿಕೆಯನ್ನು ಈಡೇರಿಸಿದಂತೆ ಆಗುತ್ತದೆ. ಇನ್ನು ರೂರಲ್ ಸರ್ವೀಸ್ ಬಗ್ಗೆ ನಾವು ಡಾಕ್ಟರ್‌ಗಳಿಗೆ ಒತ್ತಾಯ ಮಾಡುತ್ತೇವೆ. ಅವರು ಕಡ್ಡಾಯವಾಗಿ ಇಲ್ಲಿ ಕೆಲಸ ಮಾಡಬೇಕು. ಅದನ್ನು ಯಾವುದೇ ಕಾರಣಕ್ಕೂ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ, ಇಲ್ಲಿ ಅವಶ್ಯಕವಾಗಿ ಇವರು

ಸೇವೆಯನ್ನು ಮಾಡಬೇಕು. ಆದರೆ ಒಂದು ವಿಚಾರವೆನೆಂದರೆ ಈ ಪಿಜಿಗೆ ಮೊದಲನೆಯ ವರ್ಷದಲ್ಲಿ ತಮ್ಮ ಸರ್ವೀಸ್ ಅನ್ನು ಮಾಡುವ ಬದಲು ಕೊನೆಯ ವರ್ಷದಲ್ಲಿ ಅಲ್ಲೇ ಸರ್ವಿಸ್ ಮಾಡುತ್ತೇವೆಂದು ಹೇಳಿದ್ದಾರೆ. ಈ ಎರಡು ವರ್ಷದಲ್ಲಿ ಯಾವುದೇ ಒಂದು ವರ್ಷವನ್ನು ಕೊಟ್ಟರೂ ಸಮಸ್ಯೆಯಾಗುವುದಿಲ್ಲವೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ಸರ್ಕಾರ ಕಟ್ಟಡಕ್ಕೆ ಬೇಕಾದಂತಹ ಮೂಲಭೂತ ಸೌಲಭ್ಯಗಳು ಇಲ್ಲದಿದ್ದರೂ ಕೂಡ ರಾಜ್ಯ ಸರ್ಕಾರ feasibility report ಕೊಟ್ಟು ಸುಮಾರು ಏಳು ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಹೋಗಿದೆ, ಯಾವುದೇ ಸೌಲಭ್ಯಗಳು ಇಲ್ಲದೇ ಇರುವಾಗ half baked ಡಾಕ್ಟರ್‌ಗಳನ್ನು ಪ್ರೊಡ್ಯೂಸ್ ಮಾಡುವಂಥಾದ್ದು ಆಗಬಾರದೆಂದು ಅವರ ಬೇಡಿಕೆಯಾಗಿದೆ. ತಾವು ದಯಮಾಡಿ ಈ ಮೂರು ಅಂಶಗಳನ್ನು ಇವತ್ತೇ ಅವರನ್ನು ಕರೆಸಿಕೊಂಡು ಮಾತುಕತೆಯ ಮುಖಾಂತರ ಪರಿಹರಿಸಬೇಕು. ಅವರು ನಾಳೆಯಿಂದ ಕೆಲಸಕ್ಕೆ ಹಾಜರಾಗುವಂತೆ ಮಾನ್ಯ ಮಂತ್ರಿಯವರು ಕ್ರಮ ಕೈಗೊಳ್ಳುತ್ತಾರೆನ್ನುವಂತಹ ವಿಶ್ವಾಸ ನಮಗೆ ಇದೆ.

+ಶ್ರೀಮತಿ ನಫೀಸಾ ಫಜಲ್ (ವೈದ್ಯಕೀಯ ಶಿಕ್ಷಣ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಈ ವಿಷಯವಾಗಿ ನಿನ್ನೆ ದಿವಸ ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಅದೇ ರೀತಿಯಲ್ಲಿ ಈ ಸದನದಲ್ಲಿ ಉತ್ತರವನ್ನು ಕೊಡುತ್ತಿದ್ದೇನೆ. ಈಗ ಅವರ ಐದು ಬೇಡಿಕೆ ಇರುವಂಥಾದ್ದು ಅವರು ಹೇಳುವಂಥಾದ್ದು ಏನೆಂದರೆ Essentiality Certificate should be withdrawn. ಇದರ ಬಗ್ಗೆ ನಾನು ಹೇಳುವುದೇನೆಂದರೆ ಹಿಂದೆ ಇದ್ದಂತಹ ಸರ್ಕಾರ 20 ಮೆಡಿಕಲ್ ಕಾಲೇಜುಗಳಿಗೆ Essentiality Certificate ಕೊಟ್ಟಿದ್ದರು. ಇನ್ನು ಏಳು ಮೆಡಿಕಲ್ ಕಾಲೇಜುಗಳು ಪೆಂಡಿಂಗ್‌ನಲ್ಲಿತ್ತು. ನಮ್ಮ ಸರ್ಕಾರ ಬಂದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಹೇಳಿದರು. I would like to express myself in English, because I don't want to be misunderstood, because it is a very sensitive issue. After the Congress Government came, we reviewed the pending applications in front of the government through the Cabinet Sub-Committee, the State Government has got limited powers. We can only see if the applicants have got 25 acres of land and if they have a deposit of Rs. 5 crores in the bank. If they satisfy us with that, we see their credibility, their past record, their experience and on those norms, we issue Essentiality Certificate. Out of all the pending with the previous Government, the Congress Government has only given one to Srinivasa Trust, Vydethi. That is the only new one we have given.

ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ರಾಜ್ಯಸರ್ಕಾರಕ್ಕೆ ಏನೂ ಅಧಿಕಾರವಿಲ್ಲ It is the MCI and the DCI that have to be satisfied. The last Government gave 20 Essentiality Certificates, out of which only 4 were granted permission to start new Medical Colleges. The MCI and the DCI have very stringent norms and they do not give permission unless they are satisfied and unless it comes from the Union Health Minister, we cannot includeit in the seat matrix. We are at the mercy of the Centre totally. That is the point number one which I wanted to explain. Sri Sureshkumar has said that according to MCI rules, the same examiner can be used for practicals and theory. ನಾನು ಹೊಸದಾಗಿ ಮಂತ್ರಿಯಾಗಿ ಬಂದಾಗ, ಮೆಡಂ ಇಲ್ಲಿ ತುಂಬಾ ಮಾಲ್‌ಪ್ರಾಕ್ಟಿಸ್ ನಡೆಯುತ್ತಿದೆ, ಟ್ರಾನ್ಸ್‌ಫರ್‌ನ್ನಿ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರು, ನಾವು ಕ್ರಮ ತೆಗೆದುಕೊಂಡ ಮೇಲೆ ಈ ರೀತಿ ಹೇಳುತ್ತಿದ್ದಾರೆ

I just want to tell you what has happened in reality. As you rightly said Medical Council of India Regulations, 2000 mentions under the guidelines on appoint of P.G. Examiners, shall ordinarily be responsible for written practical as part of examination. This regulation of Medical Council of India is only a guideline to the Universities which conduct the examination and not mandatory Please take note of that. Moreover, the Hon'ble High Court of Karnataka has also upheld the stand of the Rajiv Gandhi University of Health Sciences, Bangalore in having different set of examiners for both theory and practicals. The model that we have set is being followed by the Annamalai University in Madras. When you have the same examiner for both theory and practical, there is more scope for malpractices. That is why the students have gone to Court and they have lost the case over that. So, I wanted to inform the Hon'ble House about this point as well. And about Residency Scheme, you know, it is pending for past 6 years. But, again according to the MCI norms, it indicates the staff strength required to each college,

clinical department-wise, the number of Professors, Readers, Lecturers, Tutors, Registrars or Senior Registrars. One of these should be there. We have already taken through KPSC. Last year we have appointed 133 lecturers. All of you know that. Earlier to that, there were other lecturers. So, in BMC and MMC alone, we have 316 Lecturers. So there is no question of having Resident Doctors, as we have already lecturers. Before the amendment of Cadre and Recruitment Rules, 133, as you know, were already recruited last year. Because, of this the necessity doesn't arise for Residental Doctors. We have also examined their demands. It is not feasible to have Residental Doctors, because there is paucity of space and funds as well. There are restrains on the State Government and it is not a feasible proposition. Regarding the rule service, our Chief Minister has stated that it is compulsory. But, I want to inform this august House that it will only be taken up next year. I have even told the Junior Doctors when I called them to my chambers. ಮಾನ್ಯ ಸದಸ್ಯರಾದ ಸಿಂಧ್ಯಾರವರಿಗೆ ಗೊತ್ತಿದ್ದೆ, ಅವರನ್ನು ಎಷ್ಟು ಸಾರಿ ನನ್ನ ಛೇಂಬರ್‌ಗೆ ಕರೆದು ನೀವು ಕೇಳಿರುವ ಎಲ್ಲಾ ಪಾಯಿಂಟ್ಸ್ ಅನ್ನು ಚರ್ಚೆ ಮಾಡಿದ್ದೇನೆ. We have not worked out the modalities of the rural scheme. We don't know in what way it is going to be done. We only know that rural service is compulsory, which all of you agree, because everybody know that meritorious students are educated out of the tax payer's money, and each M.B.B.S. student, according to the statistics available, costs the exchequer Rs. 8 lakh to educate. So, they also have a moral duty towards the society and their state and the people who are educating them, So, I am sure you will agree with me on this point. I am clearly telling that modalities have not been worked out. The question doesn't arise this year. I have told that to the students. But they have not understood it. Yesterday also I have told in the Upper House that for non-clinical PGs working in other hospitals, the proposal for giving them stipend is pending before the

Government and we will consider giving them in all fairness We will give it. The stipend that you are taking about for non-clinical students in private colleges, we are considering it and the proposal is already before the government. Now, according to the contingency plan, we have already told the doctors from the Health and the Family Welfare Department to report for work in all the teaching hospitals. In the Victoria Hospital we have deputed 30 general duty doctors and 16 speciality doctors, Orthopedic 4, Medicine4, Surgery 4, etc., I will give you the list. Specialists have come from other places. But, according to the official reports received, where all the Junior Doctors are on strike, patients are treated in the OPD. I have got all the figures and the statistics. You know that we are taking user charges from them at Rs.5/-. There is a register maintained to show as to how many OPDs have been attended to. According to authentic information which I have got through all the departments of various teaching hospitals; yesterday in the Bowring and Lady Curzon Hospital 1002 patients were attended to in the OPD and 10 in the casuality, Victoria 835 in the OPD, 44 in the casuality, Vanivilas 227 in the OPD, 20 in the casuality. In KIMS, Hubli 1044 patients were attended to yesterday and 14 in the casuality. In Bellary in the medical college attached to hospitals, it is 810 patients and in the district hospital 497 patients. In K.R. Hospital, Mysore 724 patients, in Cheluvamba 297 patients, in Belgaum 900 patients and in Davanagere 1240 patients. I have got all the records to substantiate what I am saying, There ae all the feedbacks from the all the teaching hospitals.

SRI. B. SURESHKUMAR :— But, how long the agitation should be allowed to continue? How to end the statemate? That is more important. We accept what you are all saying.

ಶ್ರೀಮತಿ ನಫೀಸ ಫಜಲ್ :— ಮಾನ್ಯ ಅಧ್ಯಕ್ಷರೆ, ನಾನು ಕೆಲವು ಲೀಡರ್‌ಗಳನ್ನು ಕರೆದು ಪ್ರೀತಿಯಿಂದ, ವಿಶ್ವಾಸದಿಂದ ಮಾತನಾಡಿ, ನಾನೇನು ಈ ಸದನದಲ್ಲಿ ಹೇಳಿದ್ದನೆ

ಅದನ್ನೆ ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ, ತಮ್ಮ ಸಲಹೆ ಏನಾದರೂ ಇದ್ದರೆ ಕೊಡಿ, ಒಪ್ಪಿಕೊಳ್ಳಲು ನಾವು ತಯಾರಾಗಿದ್ದೇವೆ, ಎಂದು. I have told you what their demands were and what my replies are from the government. What more can be done? We have made a contingency plan. The DCs have been informed to take doctors and to post them in all the teaching hospitals. I want to further say that the government is in a position to take doctors on contract basis if the strike indefinitely continues.

ಶ್ರೀ ಎಸ್. ಸುರೇಶ್ ಕುಮಾರ್ :- ವೈದ್ಯರು ಬೇಕೆಂದು, ಹೇಳಿ ಪಶುವೈದ್ಯರನ್ನು ಕರೆಯಿಸಿಬಿಟ್ಟಾರು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಧ್ಯಕ್ಷರೆ, ಮಾನ್ಯ ಮಂತ್ರಿಗಳು, ಕಿರಿಯ ವೈದ್ಯರ ಬೇಡಿಕೆಗಳೇನಿದೆ, ಅದರ ಬಗ್ಗೆ ಸರ್ಕಾರದ ನಿಲುವೇನಿದೆ ಎಂದು ಈ ಸದನದ ಮೂಲಕ ತಿಳಿಸಿದ್ದಾರೆ. ಇಲ್ಲಿ ಶೂನ್ಯವೇಳೆಯಲ್ಲಿ ನಾವು ಈ ಪ್ರಶ್ನೆ ಎತ್ತಿರುವ ಉದ್ದೇಶವೇನೆಂದರೆ, ಸರ್ಕಾರಿ ಆಸ್ಪತ್ರೆಗೆ ಬರುವವರೆಲ್ಲಾ ಬಡರೋಗಿಗಳು, ಗ್ರಾಮೀಣ ಪ್ರದೇಶದಿಂದ ಬರುವವರೇ ಜಾಸ್ತಿ, ಆಸ್ಪತ್ರೆಗಳಲ್ಲಿ ಅವರ ಅಡ್ಮಿಷನ್ ಹಾಗೂ ಚಿಕಿತ್ಸೆಗೆ ಇವತ್ತು ತುಂಬಾ ತೊಂದರೆಯಾಗಿದೆ. ಇವರೇನು ಪರ್ಯಾಯವಾಗಿ ಕಾಂಟಿಜೆನ್ಸಿ ಪ್ಲಾನ್ ಅನ್ನು ಮಾಡಿದ್ದೇವೆಂದು ಹೇಳಿದ್ದಾರೆ, ಅದು ಆಗಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಸರ್ಕಾರ ಇದನ್ನೆಲ್ಲಾ ದೊಡ್ಡ ಪ್ರತಿಷ್ಠೆಯ ಪ್ರಶ್ನೆಯಾಗಿ ಮಾಡಿಕೊಳ್ಳುವುದಕ್ಕೆ ಹೋಗಬಾರದು, ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಯಿಸಿ ಮಾತನಾಡಿ ಇರುವ ವಾಸ್ತವಾಂಶಗಳನ್ನು ಹೇಳಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಸರ್ಕಾರವಿದ್ದಾಗ ಅವರಿಗೆ ಸ್ಪೆಫಂಡ್ ಕೊಟ್ಟಿರುವ ಉದಾಹರಣೆಗಳಿವೆ At least one or two demands, if you conceder, then they will come for the talks. ಅದನ್ನು ಬಿಟ್ಟು ನೀವು ಪರ್ಯಾಯ ವ್ಯವಸ್ಥೆಯನ್ನು ಮಾಡುವುದಿಲ್ಲ, ಕರೆಯಿಸಿ ಅವರೊಡನೆ ಮಾತನ್ನು ಆಡುವುದಿಲ್ಲ. ಎಂದು ಹೇಳಿದರೆ ಕಷ್ಟವಾಗುತ್ತದೆ Sri Kailash Patil has said two or three important facts. You are not prepared even to apply your mind about the quack doctors.

ಸಭಾಧ್ಯಕ್ಷರು :— ಅವರಿಗೆ ಸ್ವಲ್ಪ ಸಮಯ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ :— ಜುಲೈ 10ನೇ ತಾರೀಖಿನಿಂದ ಬ್ಲಾಕ್ ಬ್ಯಾಡ್ಜ್ ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ ಅವತ್ತಿನಿಂದ ಸಮಯ ಇರಲಿಲ್ಲವೆ?

1.00 ಪಿ.ಎಂ.

ಶ್ರೀಮತಿ ನಫೀಸಾ ಫಜಲ್:— ಪ್ರತಿ ಬೇಡಿಕೆ ಬಗ್ಗೆ ಉತ್ತರ ಕೊಟ್ಟರೆ ಆಯಿತು Rural service, we don't even know what modalities they are going to work out. One reply is straightaway got. Second reply, I told you we will be giving them their stipend. ಅದನ್ನು ಕನ್‌ಸೀಡ್ ಮಾಡಿಯಾಯಿತು. ಇನ್ನು ನಾನೇನು ಹೇಳಲಿ? ತಾವು ಆಗಿಲ್ಲವೆನ್ನುತ್ತೀರಿ But, I want to specially tell you that there is always a time-lag between the orders issued and the the doctors reporting. They have to get relieved from their present post. As of now, about 50% of the deputed doctors have reported from the Health and Family Welfare Department and the rest are expected to report during the due course of the day and in the other places deputation itself. ಮಾನ್ಯ ಸಿಂಧ್ಯರವರು ಆಗಿಲ್ಲವೆನ್ನುತ್ತಾರೆ. If it is not a fact, how come I have got all these statistics that as many OPD patients, so many casualties have been attended to yesterday? You please seek the register and I will send for it and give it to you through the Hon'ble Speaker.

ಶ್ರೀ ಎಸ್. ಸುರೇಶ್ ಕುಮಾರ್:— Sri Sindhia was also the Health Minister. He knows how to get the statistics.

SMT. NAFEES FAZAL :— Why? I myself replied. I can't lie to the House. Isn't it? Why will I lie? ಯಾರೂ ಕೆಲಸ ಮಾಡದಿದ್ದರೆ, ನಾನು ಹೇಳುತ್ತಿದ್ದೆ ಇಲ್ಲ ಮಾಡಿಲ್ಲ ಎಂದು ನಿನ್ನೆ ಹೇಳಿದ ಹಾಗೆ, ಸಾಯಂಕಾಲ ನಮ್ಮ ಆಫೀಸಿನಲ್ಲಿ ಕುಳಿತುಕೊಂಡು ಎಲ್ಲಾ ಮಾನಿಟರ್ ಮಾಡಿದ ಮೇಲೆ, ತಾವು ನನಗೆ ಹೇಳುತ್ತೀರಲ್ಲಾ? I am not so irresponsible. I know my duty also.

ಶ್ರೀ ಎ. ರಾಮದಾಸ್:— ಮೆಡಿಕಲ್ ಎಜ್ಯುಕೇಷನ್‌ಗೆ ಬೇಕಾದ ಡಾಕ್ಟರ್‌ಗಳನ್ನು ಹೆಲ್ತ್ ಮತ್ತು ಫ್ಯಾಮಿಲಿ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ಇವರು 50 ಪರ್ಸೆಂಟ್ ತೆಗೆದುಕೊಳ್ಳುತ್ತೇವೆಂದರೆ, ಹಳ್ಳಿಯ ಆಸ್ಪತ್ರೆಗಳ ಪರಿಸ್ಥಿತಿ ಏನು? ಅಲ್ಲಿನ ರೋಗಿಗಳು ಏನು ಮಾಡಬೇಕು? You must come out with the plan. ರೆಸಿಡೆನ್ಷಿಯಲ್ ಸ್ಕೀಂಗೆ ಹಿಂದಿನ ಸರ್ಕಾರವಿದ್ದಾಗಲೇ ಸಹಿ ಮಾಡಿದೆ. ರೆಸಿಡೆನ್ಷಿಯಲ್ ಸ್ಕೀಂ ಮತ್ತು ಎಗ್ಜಾಮಿನೇಷನ್ ಬಗ್ಗೆ ಹೇಳಿದ್ದೀರಿ. ನಿಮ್ಮದೇ ಸರಿ ಇದೆ ಎಂದು ಹೇಳಿದರೆ,

ತೆಗೆದುಕೊಳ್ಳಿ. ಅವರ ಎರಡೂ ಬೇಡಿಕೆಗಳನ್ನು ಒಪ್ಪಿ, ನ್ಯಾಯಯುತ ಬೇಡಿಕೆಗಳನ್ನು ಇತ್ಯರ್ಥಪಡಿಸಿ, ಇವತ್ತು ಸರ್ಕಾರ ಎಲ್ಲದಕ್ಕೂ ಇದೇ ರೀತಿ ಇರುತ್ತದೆಂದು ಹಠ ಮಾಡಬೇಡಿ. ಅದಕ್ಕೆ ಕೇವಲ ಒಂದೂವರೆ ಕೋಟಿ ರೂ.ಗಳಾಗಬಹುದು. ಅದಕ್ಕೆ ಒಪ್ಪಿಗೆ ಕೊಡದಿದ್ದರೆ ತಪ್ಪಾಗುತ್ತದೆ.

SMT. NAFEES FAZAL :— Mr. Speaker, the Opposition Members also can talk to the striking Doctors and help the government. It is also your duty being representatives of the people. I said this yesterday also. Why you should depend only on the government? You can come and strengthen our hands. ನಮಗೆ ತಾವು ಸಲಹೆ ಕೊಡಿ We are open take your suggestions.

(ಗೊಂದಲ)

MR. SPEAKER :— Sort out the issue as early as possible.

SMT. NAFEES FAZAL :— Mr. Speaker, even regarding the junior doctors, whatever we are prepared to do, we have examined.

ಶ್ರೀ ಎ. ರಾಮದಾಸ್ :— ತಾವೇ ಅಲ್ಲಿಯ ಪ್ರತಿನಿಧಿಗಳನ್ನು, ಮಂತ್ರಿಗಳನ್ನು ತಮ್ಮ ಛೇಂಬರ್ಸ್‌ಗೆ ಕರೆಸಿ, ಇತ್ಯರ್ಥಪಡಿಸಿ. ಇದು ರೋಗಿಗಳ ಪ್ರಶ್ನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, You all should be very happy.

SRI C. BYREGOWDA :— 'As early as possible'. ಎಂದು ಹೇಳಿದ್ದೀರಿ. ಆದಾಗುವುದಿಲ್ಲ. ಸರ್ಕಾರಿ ಆಸ್ಪತ್ರೆಗಳಿಗೆ ಬರುವವರು ಬಡ ರೋಗಿಗಳು. ಅವರು ಎಲ್ಲಿಂದಲಾದರೂ ಬರಲಿ. ಅವರ ಜೀವನದ ಜೊತೆ, ಆರೋಗ್ಯದ ಜೊತೆ ಚೆಲ್ಲಾಟವಾಡುವುದು ಬೇಡ. ಆದುದರಿಂದ, ಅವರನ್ನು ಯಾವ ರೀತಿ ಕರೆದು ಮಾತನಾಡಬೇಕೋ ಅದನ್ನು ಮಾಡಿ. ಈ ಸಮಸ್ಯೆಯನ್ನು ಬಗೆಹರಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ :— ಎಲ್ಲರೂ ಸ್ಯಾಟಿಸ್‌ಫೈ ಆಗಿದ್ದೀರಿ. ಸರ್ಕಾರ ಸಿನ್ಸಿಯರ್‌ಆಗಿ ಅಟೆಂಪ್ಟ್ ಮಾಡುತ್ತಿದೆಯೋ, ಇಲ್ಲವೋ? ಸ್ಟ್ರೈಕ್ ಮಾಡುವವರ ಟೆಂಡೆನ್ಸಿ ಏನಿದೆ ಎಂಬುದು ತಮಗೆ ಗೊತ್ತಿದೆ. ನಾವು, ನೀವು, ವಿದ್ಯಾರ್ಥಿಗಳಾಗಿದ್ದವರು ಹೋರಾಟ ಮಾಡಿದರೆ ಏಕ್‌ದಂ ಆ ಸಮಸ್ಯೆ ಬಗೆಹರಿಸುವುದಿಲ್ಲ. ಅವರು

ಪ್ರಾಮಾಣಿಕತೆಯಿಂದ ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ನೀವು ಅಪ್ರೀಷಿಯೇಟ್ ಮಾಡಬೇಕು, ಎನ್‌ಕರೇಜ್ ಮಾಡಿ.

SRI C. BYREGOWDA :— This is not a case where appreciation or depreciation to be counted.

ಶ್ರೀಮತಿ ನಫೀಸಾ ಫಜಲ್ :— ನಮ್ಮ ಮಾಹಿತಿ ಪ್ರಕಾರ, total number of PGs in the 4 government colleges is only 709 and the interns is 484. How you have got the figures of 10,000. I don't understand. I didn't understand that point at all. ನಮ್ಮ ಹತ್ತಿರ ಮಾಹಿತಿ ಇದೆ It is only 709 and 484.

SRI KAILASNATH PATIL :— Sir, I would like to know from the Hon'ble Minister. What action she will take on the quacks? They have reported that so many quacks are in the State. What action they will take?

ಶ್ರೀಮತಿ ನಫೀಸಾ ಫಜಲ್ :— ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಸದನಕ್ಕೆ ಆಶ್ವಾಸನೆ ಕೊಡುತ್ತೇನೆ.

MR. SPEAKER :—That subject is over.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :— ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಗೆಂದು 17ನೇ ತಾರೀಖು ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು :— ಶೂನ್ಯವೇಳೆ ಶುರು ಮಾಡಿ ಈಗಾಗಲೇ ಒಂದು ಗಂಟೆ ಕಾಲವಾಗಿದೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ :— ಅದಕ್ಕೆ ಯಾರು ಜವಾಬ್ದಾರರು?

MR. SPEAKER :—We can't make it Zero hours.

ಶ್ರೀ ಡಿ.ವಿ. ಸದಾನಂದಗೌಡ :— ಎಲ್ಲಾ ವಿಚಾರಗಳು ಅಫ್ಟರ್‌ಹೌಸ್‌ನಲ್ಲಿ ಪ್ರಸ್ತಾಪವಾಗುತ್ತವೆ. ಈ ಮನೆ ಎಲ್ಲಾ ಸದಸ್ಯರು ಯಾವುದಕ್ಕೂ ನಾಲಾಯಕ್ ಎಂಬ ಭಾವನೆ ಬರುತ್ತಿದೆ.

MR. SPEAKER :— I have no comments on the Upper House. Please hear me. ಶೂನ್ಯವೇಳೆಯಲ್ಲಿ ಒಂದೆರಡು ಮುಖ್ಯವಾದ ವಿಷಯಗಳಿದ್ದರೆ ಅದನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು :— ಪಿ.ಹೆಚ್. ಪೂಜಾರ್ ಮತ್ತು ಜಯಪ್ರಕಾಶ್ ಹೆಗ್ಡೆಯವರೇ, ನೀವು ನಾಳೆ ವಿಷಯವನ್ನು ರೈಸ್ ಮಾಡಿ, ನೋಡೋಣ.

4. ವಿತ್ತೀಯ ಕಾರ್ಯಕಲಾಪ

2001-2002 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :— ನಿನ್ನೆ ನಾನು ಮಾತನಾಡಲು ಪ್ರಾರಂಭಿಸಿದಾಗ ಸರ್ಕಾರ ಬರ ಪರಿಹಾರಕ್ಕಾಗಿ ಕೆಲವು ಒಳ್ಳೆಯ ಘೋಷಣೆಗಳನ್ನು ಮಾಡುವುದರ ಜೊತೆಗೆ, ಕೋಆಪರೇಟಿವ್ ಲೋನ್‌ಗೆ ಒನ್ ಟೈಂ ಸೆಟ್ಲ್‌ಮೆಂಟ್ ಅನ್ನು ಆಗಸ್ಟ್ 14ನೇ ತಾರೀಖಿನವರೆಗೆ ಎಕ್ಸ್‌ಟೆಂಟ್ ಮಾಡಿದ್ದೇವೆಂದು ತಿಳಿಸಿತು. ನಾನು ನಿನ್ನೆ ಪ್ರಸ್ತಾಪಿಸಿ ಹೇಳಿದೆ, ಇದರ ವಿಷಯದಲ್ಲಿ ಇವತ್ತು,

``Guidelines for one-time settlement (OTS) of chronic NPAs, overdues in the long-term co-operative credit structure."

"The Scheme will remain operative upto 31st March, 2002." ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲವೆಂಬ ರೀತಿ ಹೇಳಿದರೆ ಹೇಗೆ?

ಶ್ರೀ ಡಿ.ಕೆ. ಶಿವಕುಮಾರ್ :— ಅದು ನಮಗೆ ಗೊತ್ತಿದೆ. ನೀವು ಹೇಳುವುದನ್ನೆಲ್ಲಾ ಕೇಳುತ್ತೇವೆ. ಅದರ ಬಗ್ಗೆ 27ನೇ ತಾರೀಖು ಮಾತನಾಡೋಣ. ಅಲ್ಲಿಯವರೆಗೆ ನಿಮಗೆ ಕೈಮುಗಿಯುತ್ತೇನೆ, ಸುಮ್ಮನಿರಿ. ರಿಕವರಿ ಚೆನ್ನಾಗಿ ಆಗುತ್ತಿದೆ. 28ನೇ ತಾರೀಖು ತಮ್ಮ ರಿಕ್ವೆಸ್ಟ್‌ಗೆ ನಾನು ಯೀಲ್ಡ್ ಆಗುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ನೀವು ತಪ್ಪು ತಿಳಿದುಕೊಂಡಿದ್ದೀರಿ. ನಾನು ಕಳುಹಿಸಿದ್ದು, ಕೋ ಆಪರೇಟೀವ್ ಲೋನ್ ಬಗ್ಗೆಯಲ್ಲ. ನೀವು ಪವರ್ ಕಟ್ ಬಗ್ಗೆ ಕೇಳಿದ್ದಿರಿ. ಕೆಇಬಿಗೆ ಒನ್ ಟೈಂ ಸೆಟ್ಲ್‌ಮೆಂಟ್ ಬಗ್ಗೆ ಕೇಳಿದ್ದಿರಿ. ನೀವು ಅದರಲ್ಲಿ ಬರೆದಿರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :— ವಸೂಲಿ ಚೆನ್ನಾಗಿ ಆಗುವುದಾದರೆ ಅದರ ಬಗ್ಗೆ ನಾನು ಮಾತನಾಡುವುದನ್ನು ನಿಲ್ಲಿಸುತ್ತೇನೆ. ನಮ್ಮ ಕಡೆ ವ್ಯವಸಾಯಕ್ಕೆ ಆರಂಭವೆಂದು